Rotary

ರೋಟರಿ ಐಸಿರಿ ಪರ್ಕಳ

ವಲಯ-4, ರೋ. ಜಿಲ್ಲೆ-3182

ನಮ್ಮ ನಡೆ... ಕೃಷಿಯ ಕಡೆ...

UNITE FOR GOOD



Rtn. Francesco Arezzo
R.I. President



Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 19

ದಿನಾಂಕ: 11.11.2025



Rtn. Anil Kumar
President



Rtn. Krishnappa
Secretary

## ಧನ್ಯತಾಭಾವ ಮೂಡಿಸಿದ ಹೊರಾಂಗಣ ಸಭೆ



ನವೆಂಬರ್ 6ನೇ ತಾರೀಕಿನಂದು ಅತ್ರಾಡಿಯ ಭವ್ಯ ಶಾಂಭವೀ ಹೋಟೆಲ್ ಸಭಾಂಗಣದಲ್ಲಿ ನಡೆದ ನಮ್ಮ ಹೊರಾಂಗಣ ಸಭೆಯು ರೋಟರಿ ಜಿಲ್ಲೆ 3182ರ ವಲಯ 4ರ ಸಾಂಸ್ಕೃತಿಕ ಸಮ್ಮಿಲನ "ಕಲಾ ಮಂಜೂಷ" ಕಾರ್ಯಕ್ರಮದ **ಎಲ್ಲಾ ಒಂಭತ್ತು ಸ್ಪರ್ಧಾ ವಿಭಾಗಗಳಲ್ಲಿಯೂ ಸ್ಪರ್ಧಿಸಿ, ಎಲ್ಲದರಲ್ಲೂ ಬಹುಮಾನಗಳಿಸಿದ** ಅಭೂತಪೂರ್ವ ಯಶಸ್ಸಿನ ಸಂಭ್ರಮಾಚರಣೆಗೆ ವೇದಿಕೆಯಾಯಿತು.

ಸಮುದಾಯಸೇವಾ ನಿರ್ದೇಶಕರಾದ ರೊ. ಕೆ. ಪ್ರಕಾಶ್ ಶೆಣೈಯವರ ಪ್ರಾಯೋಜಕತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ವಾರದ ಸಭೆಯ ಕಲಾಪಗಳ ಜೊತೆಗೆ ಕಲಾ ಮಂಜೂಷಾದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ರೋಟರಿ ಐಸಿರಿ ಸದಸ್ಯರು, ಆನ್, ಅನ್ನೆಟ್ ಮತ್ತು ಜೋನ್ ಹಾಗೂ ಕಿರು ಪ್ರಹಸನಕ್ಕೆ ಮೆರುಗು ನೀಡಿದ ಕಲಾವಿದರನ್ನು ಗೌರವಿಸಲಾಯಿತು.

ಅಧ್ಯಕ್ಷತೆ ವಹಿಸಿದ ರೋಟರಿ ಐಸಿರಿ ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು. ವಲಯ ಸೇನಾನಿ ರೊ. ಸ್ಮಿತಾ ಕಾಮತ್ ಕಾರ್ಯಕ್ರಮದ ಅವಲೋಕನ ನಡೆಸಿ ಕೇವಲ ನಾಲ್ಕನೇ ವರ್ಷದಲ್ಲಿಯೇ ರೋಟರಿ ಐಸಿರಿ ಇಷ್ಟೊಂದು ಸಾಧನೆಗೈಯಲು ಸಾಧ್ಯವಾದುದಕ್ಕೆ ಅತೀವ ಹರ್ಷ ವ್ಯಕ್ತಪಡಿಸಿದರು.

ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರ್ವಹಿಸಿದ ರೊ. ಡಾ. ಸ್ವಾತಿ ಪೈ, ಉತ್ತಮ ನಾಟಕ ರಚಿಸಿ ನಿರ್ದೇಶಿಸಿದ ರೊ. ಕೃಷ್ಣಪ್ಪ, ನಾಟಕದ ಪೂರ್ವತಯಾರಿ ವೇಳೆ ಸೂಕ್ತ ಮಾರ್ಗದರ್ಶನ ನೀಡಿದ ಕಲಾವಿದ ಶ್ರೀಯುತ ನಿತಿನ್, ಪ್ರಸಾದನ ಮತ್ತು ರಂಗಸಜ್ಜಿಕೆಯನ್ನು ನಿರ್ವಹಿಸಿದ ಕಲಾವಿದ ಶ್ರೀಯುತ ಪಾಂಡುರಂಗ ಪ್ರಭು ಪರ್ಕಳ, ಸಭೆಯ ಪ್ರಾಯೋಜಕ ರೊ. ಕೆ. ಪ್ರಕಾಶ್ ಶೆಣೈ ಇವರನ್ನು ಶಾಲುಹೊದೆಸಿ, ಸ್ಮರಣೀಕೆ ನೀಡಿ ಗೌರವಿಸಲಾಯಿತು.

## ಪ್ರೇರಣಾ ಸಿರಿ: ರೋಟರಿ ಮಾಹಿತಿ Why TRF



Past Assistant Governor
Rtn. MPHF. Dr. Ganesha A
Treasurer, Rotary Aisiri

As we know in Rotary, November is the Rotary Foundation month, let us discuss on; Reasons Why a Rotarian should contribute to The Rotary Foundation (TRF):

1. TRF is of the Rotarians, by the Rotarians for the World.
2. TRF also is an abbreviation of Temple of Rotary Fraternity. Frequent visits to this temple will make our life happier and more purposeful.
3. The main purpose of TRF is international understanding and world peace. As such our contribution will help to bring peace on earth.
4. TRF programs are simple, cost effective, transparent and need based.
5. We can make sure that our hard-earned money reaches the right place, at the right time and will reach the needy and the deserving.

*(Ref. 'Know Your Rotary' by Rtn. N. Bhaskaran Pillai)*

*Will be continued in next edition....*





ಕಲಾವಿದರಾದ ಶ್ರೀಯುತ ಪಾಂಡುರಂಗ ಪ್ರಭು ಪರ್ಕಳ ಮತ್ತು ಶ್ರೀಯುತ ನಿತಿನ್ ರವರ ಮೆಚ್ಚುಗೆಯ ನುಡಿಗಳು.





**ರೋಟರಿ ಐಸಿರಿಯ ಆಶ್ರಯದಲ್ಲಿ ವಲಯ 4ರ ಪುನರಾವಲೋಕನ ಸಭೆ:**. ನವೆಂಬರ್ 10 ರಂದು ಆರ್.ಸಿ.ಸಿ. ಕಾರ್ಯಾಲಯದಲ್ಲಿ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೊ. ಅನಿಲ್ ಕುಮಾರ್ ವಹಿಸಿದ್ದರು. ವಲಯದ ನೇತಾರ, ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಮುನ್ನಡೆಸಿದ, ಈ ಸಭೆಯಲ್ಲಿ ವಲಯದ ಎಲ್ಲಾ ಎಂಟೂ ಕ್ಲಬ್ ಗಳು – ರೋಟರಿ ಐಸಿರಿ, ರೋಟರಿ ಕಟಪಾಡಿ, ರೋಟರಿ ಮಣಿಪಾಲ, ರೋಟರಿ ಮಣಿಪಾಲ್ ಹಿಲ್ಸ್, ರೋಟರಿ ಮಣಿಪಾಲ್ ಟೌನ್, ರೋಟರಿ ಪರ್ಕಳ, ರೋಟರಿ ಉಡುಪಿ ಮತ್ತು ರೋಟರಿ ಉದ್ಯಾವರದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಭಾಗವಹಿಸಿದ್ದರು. Zonal Learning Facilitator ರೊ. ಡಾ. ಎ. ಗಣೇಶ, ವಲಯ ಸೇನಾನಿಯವರಾದ ರೊ. ಸ್ಮಿತಾ ಕಾಮತ್, ರೊ. ಡಾ. ಶ್ರೀಧರ್, ರೊ. ಜನಾರ್ಧನ್ ಭಟ್, Zonal IT chairman ರೊ. ಪ್ರಶಾಂತ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಬೌದ್ಧಿಕ ಸಿರಿ ಪ್ರತಿಯೊಬ್ಬರ ಪಾತ್ರವೂ ಅನನ್ಯ!

ಒಮ್ಮೆ ಒಬ್ಬ ರಾಜನಿಗೆ ತನ್ನ ಅರಮನೆಗೆ ಅದ್ಭುತವಾದ ಒಂದು ಗಡಿಯಾರವನ್ನು ನಿರ್ಮಿಸುವ ಆಸೆ ಬಂತು. ತನ್ನ ಮತ್ತು ನೆರೆಹೊರೆಯ ರಾಜ್ಯಗಳ ಶ್ರೇಷ್ಠ ಕಾರ್ಮಿಕರು, ಕಲಾವಿದರು, ತಂತ್ರಜ್ಞರು ಎಲ್ಲರನ್ನು ಒಟ್ಟು ಸೇರಿಸಿ, ಅವರ ನೈಪುಣ್ಯದಿಂದ ದೊಡ್ಡ ಗಡಿಯಾರವೊಂದನ್ನು ನಿರ್ಮಿಸಿದನು..

ಗಡಿಯಾರದಲ್ಲಿ ದೊಡ್ಡ ಮುಳ್ಳು, ಚಿಕ್ಕ ಮುಳ್ಳು, ಗಂಟೆ ಹೊಡೆಯುವ ದೊಡ್ಡ ಲೋಲಕ, ಒಳಗಿನ ಚಕ್ರಗಳು, ಗೇರುಗಳು, ಬೇರಿಂಗ್ ಗಳು, ಚಿಕ್ಕ ಪುಟಾಣಿ ಭಾಗಗಳು– ಎಲ್ಲವೂ ಸೇರಿದ್ದವು. ಗಡಿಯಾರ ರಾಣಿ ಅರಮನೆಯಲ್ಲಿ ಅಳವಡಿಸಿದಾಗ ಎಲ್ಲರೂ ಶ್ಲಾಘಿಸಿದರು.

ಕೆಲ ದಿನಗಳಲ್ಲಿ ಆ ಗಡಿಯಾರ ನಿಂತುಬಿಟ್ಟಿತು !

ರಾಜನು ತಕ್ಷಣ ಗಡಿಯಾರ ನಿರ್ಮಿಸಿದವರನ್ನು ಕರೆಯಿಸಿ ಕಾರಣ ಕೇಳಿ, ಅದನ್ನು ಕೂಡಲೇ ಸರಿಪಡಿಸಲು ಆದೇಶಿಸಿದನು. ಅವರು ತಪಾಸಣೆ ಮಾಡಿದಾಗ, ಗಡಿಯಾರದ ಒಳಗಿನ ಒಂದು ಚಿಕ್ಕ ಪುಟಾಣಿ ಗೇರ್ ಕೆಲಸ ನಿಲ್ಲಿಸಿದ್ದನ್ನು ಕಂಡರು. ಯಾಕೆ ಎಂದು ಕೇಳಿದಾಗ, ಅದು ಹೀಗೆ ಹೇಳಿತು:

"ನಾನಿದ್ದರೇನು ? ಬಿಟ್ಟರೇನು ? ನನ್ನಿಂದ ಏನು ದೊಡ್ಡ ಕೆಲಸ ಆಗುತ್ತೆ? ದೊಡ್ಡ ಮುಳ್ಳು, ಚಿಕ್ಕ ಮುಳ್ಳು, ದೊಡ್ಡ ಲೋಲಕ - ಇವರೇ ಮುಖ್ಯ. ನಾನು ಏಕೆ ಶ್ರಮಿಸಬೇಕು?"

ಗಡಿಯಾರದ ಕಾರ್ಮಿಕನು ಮೃದುವಾಗಿ ಹೇಳಿದ:

"ನೀನು ಚಾಲನೆ ನೀಡದೆ ಇದ್ದರೆ, ದೊಡ್ಡವರು ಯಾರು ಮುಂದೆ ಹೋಗುತ್ತಾರೆ? ದೊಡ್ಡವರು ದೊಡ್ಡದಾಗಿ ಕಾಣುವುದು, ನೀನೇ ನೀಡುವ ಚಾಲಕ ಶಕ್ತಿಯಿಂದ!"

ಅದು ತನ್ನ ತಪ್ಪನ್ನು ಅರಿತು ಹಿಂತಿರುಗಿ ಕೆಲಸ ಶುರುಮಾಡಿತು. ಗಡಿಯಾರ ಮತ್ತೆ ಟಿಕ್ ಟಿಕ್ ಎಂದು ಕಾಲವನ್ನು ಸಾಗಿಸತೊಡಗಿತು.

ಚಿಕ್ಕವರಾಗಲಿ, ದೊಡ್ಡವರಾಗಲಿ, ಹುದ್ದೆ ಎಷ್ಟು ದೊಡ್ಡದಾಗಲಿ, ಈ ಜಗತ್ತಿನಲ್ಲಿ ಪ್ರತಿಯೊಬ್ಬರೂ ಅತೀ ಮುಖ್ಯರು. ಏಕೆಂದರೆ ಪ್ರತಿಯೊಬ್ಬರ ಪಾತ್ರವೂ ಅನನ್ಯ!

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಹೊರಾಂಗಣ ಸಭೆಯಲ್ಲಿ




ಕುಮಾರಿ ಗಾನವಿ ಅವರ ಕೊಳಲು ವಾದನ





ಸಭೆಯಲ್ಲಿ ಉಪಸ್ಥಿತರಿರುವವರ ಅನಿಸಿಕೆಗಳು

## ಕಾರ್ಯದರ್ಶಿಯವರ ವರದಿ



ರೋಟರಿ ಐಸಿರಿಯ 16ನೇ ವಾರದ ಸಭೆಯು 6/11/2025 ರಂದು ಶಾಂಭವಿ ಮಿನಿಹಾಲ್ ನಲ್ಲಿ ನಡೆಯಿತು. ಈ ಹೊರಾಂಗಣ ಸಭೆ ಹಾಗೂ ಭೋಜನ ಕೂಟವನ್ನು ರೊ. ಪ್ರಕಾಶ್ ಶೆಣೈ ಅವರು ಪ್ರಾಯೋಜಿಸಿದರು. ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಕೊರಳ ಲಾಂಛನ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. ಗೀತಾಶ್ರೀ ಎಂ ಉಪಾಧ್ಯ ಪ್ರಾರ್ಥನೆ ನಡೆಸಿದರು. ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಸಭೆಯನ್ನು ಸ್ವಾಗತಿಸಿದರು. ಆಧಾರ್ ತಿದ್ದುಪಡಿ ಕಾರ್ಯಕ್ರಮದ ಪೂರ್ವತಾಯರಿ ಬಗ್ಗೆ ತಿಳಿಸಿದ ರೊ. ಪಾಂಡುರಂಗ ಲಾಗ್ವಾಂಕರ್ ಅವರು ಕಾರ್ಯಕ್ರಮವನ್ನು 15 November ರಂದು ನಡೆಸುವುದಾಗಿ ತಿಳಿಸಿದರು. ಮುಂಬರುವ Governor ಭೇಟಿ ಬಗ್ಗೆ ಬೋರ್ಡ್ ಮೀಟಿಂಗ್ ನಲ್ಲಿ ಚರ್ಚಿಸಲು ನಿರ್ಧರಿಸಲಾಯಿತು.

ವಾರದ ಬುಲೆಟಿನ್ ಐಶ್ವರ್ಯವನ್ನು ರೊ. ಪ್ರಕಾಶ್ ಶೆಣೈ ಬಿಡುಗಡೆಗೊಳಿಸಿದರು. ಸಂಪಾದಕರಾದ ರೊ. ರಾಜೇಶ್ ಡಿ ಶೆಣೈ ಅವರು ಸಹಕರಿಸಿದರು. ರೊ. ಎ. ಗಣೇಶ್ ಅವರು ಕಳೆದ ತಿಂಗಳ ಆಯವ್ಯಯ ಪಟ್ಟಿಯನ್ನು ಮಂಡಿಸಿದರು. ಜೊತೆಗೆ ಸಾಂಸ್ಕೃತಿಕ ಸ್ಪರ್ಧೆಯ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ರೊ. ಮಂಜುನಾಥ್ ಉಪಾಧ್ಯ ಅವರು ಸ್ಪರ್ಧೆಯಲ್ಲಿ ಭಾಗವಹಿಸಿದ ಸದಸ್ಯರೆಲ್ಲರನ್ನು ಪ್ರಶಂಸಿಸಿದರು. ರೊ. ರಾಜೇಶ್ ಶೆಣೈ ಅವರು ತಮ್ಮ ಸಂತಸ ವ್ಯಕ್ತಪಡಿಸಿದರು. ರೊ. ಗೀತಾಶ್ರೀ ಎಂ ಉಪಾಧ್ಯ ಐಸಿರಿಯ ಒಟ್ಟು ಸಾಧನೆಯನ್ನು ಅಭಿನಂದಿಸಿದರು. ರೊ. ಸಂದೀಪ್ ಕುಮಾರ್ ಕಲ್ಚರಲ್ ಸ್ಪರ್ಧೆಯಲ್ಲಿ ತಮ್ಮ ಸುಂದರ ಅನುಭವಗಳನ್ನು ಹಂಚಿಕೊಂಡರು. ರೊ. ಅಶೋಕ್ ಅವರು ನಾಟಕದಲ್ಲಿ ತಮಗೆ ಸಿಕ್ಕಿದ ಪಾತ್ರದ ಬಗ್ಗೆ ಸಂತೋಷ ಪಟ್ಟು ಎಲ್ಲ ಸ್ಪರ್ಧೆಗಳಲ್ಲೂ ಐಸಿರಿಯ ಉತ್ತಮ ಪ್ರದರ್ಶನವನ್ನು ಹೊಗಳಿದರು.

ರೊ. ಗುರುಪ್ರಸಾದ್ ಕಾಮತ್ ಅವರು ತಮ್ಮ ಸುಧೀರ್ಘ ರೋಟರಿ ಅನುಭವದಲ್ಲಿ ಈ ಸಾಧನೆ ಒಂದು ಮರೆಯಲಾಗದ ಕ್ಷಣ ಎಂದು ತಿಳಿಸಿದರು. ರೊ. ಸ್ಮಿತಾ ಕಾಮತ್ ಅವರು ಸಂಪೂರ್ಣ ಕಾರ್ಯಕ್ರಮದ ಅವಲೋಕನ ಮಾಡಿದರು. ರೊ. ಸುನಿಲ್ ಶೆಟ್ಟಿ ಮುಂದೆಯೂ ಇಡೀ ರೀತಿ ಒಗ್ಗಟ್ಟಾಗಿ ಇನ್ನೂ ಹೆಚ್ಚಿನ ಸಾಧನೆ ಮಾಡೋಣ ಎಂದರು. ಆನ್ ರೂಪಶ್ರೀ ಶೆಟ್ಟಿ ರೋಟರಿ ಒಡನಾಟ ಸಂತಸ ತಂದಿದೆ ಎಂದರು. ರೊ. ಕೃಷ್ಣಪ್ಪ ನಾಟಕ ರಚಿಸಿ ಪ್ರದರ್ಶಿಸುವಲ್ಲಿ ತಮಗೆ ಆದ ಅನುಭವಗಳನ್ನು ಹಂಚಿಕೊಂಡರು. ರೊ. ಸ್ವಾತಿ ಪೈ ಅವರು ಕಲ್ಚರಲ್ ಕೋರ್ಡಿನೇಟರ್ ಎಲ್ಲ ಸ್ಪರ್ಧಾಳುಗಳಿಗೆ ಐಸಿರಿ ಕುಟುಂಬದ ಸದಸ್ಯರನ್ನು ಹಾಗೂ ಸಹಕರಿಸಿ ಉತ್ಸಾಹದಿಂದ ಪಾಲ್ಗೊಂಡ ಮಕ್ಕಳನ್ನು ಅಭಿನಂದಿಸಿದರು. ನಾಟಕದ ತರಬೇತಿ ನೀಡಿದ ಶ್ರೀ ನಿತಿನ್ ಹಾಗೂ ರಂಗಸಜ್ಜಿಕೆ ಮತ್ತು ಮೇಕ್ up ನಲ್ಲಿ ಸಹಕರಿಸಿದ ಶ್ರೀ ಪಾಂಡುರಂಗ ಪ್ರಭು ಇವರನ್ನು ಗುರುತಿಸಲಾಯಿತು.

ಶ್ರೀ ನಿತಿನ್ ಅವರು ಐಸಿರಿಯ ಕಲಾಭಿಮಾನಕ್ಕೆ ಪ್ರಶಂಸಿಸಿದರು. ನಾಟಕದ ಕಥೆ ಹಾಗೂ ಪಾತ್ರಗಳ ಸೃಷ್ಟಿಯ ಬಗ್ಗೆ ರೊ. ಕೃಷ್ಣಪ್ಪರವರನ್ನು ಪ್ರಶಂಸಿಸಿದರು. ಶ್ರೀ ಪಾಂಡುರಂಗ ಪ್ರಭು ಅವರು ರೋಟರಿ ಐಸಿರಿಯ ಒಗ್ಗಟ್ಟನ್ನು ಮೆಚ್ಚಿ ಮುಂದಿನ ದಿನಗಳಲ್ಲಿ ಸದಾ ಸಹಕರಿಸುವೆನೆಂದು ಭರವಸೆ ಇತ್ತರು. ಅಭೂತಪೂರ್ವ ಸಾಧನೆ ಎಂಬಂತೆ ಸಾಂಸ್ಕೃತಿಕ ಸ್ಪರ್ಧೆಯ ಎಲ್ಲ ವಿಭಾಗಗಳಲ್ಲಿ ಭಾಗವಹಿಸಿ, ಎಲ್ಲದರಲ್ಲೂ ಬಹುಮಾನ ಪಡೆಯಲು ಮುಖ್ಯ ಕಾರಣರಾದ ರೊ. ಸ್ವಾತಿ ಅವರನ್ನು ಗುರುತಿಸಲಾಯಿತು ಉತ್ತಮ ನಾಟಕ ರಚಿಸಿ ನಿರ್ದೇಶಿಸಿ ಐಸಿರಿಯನ್ನು ಜಿಲ್ಲಾ ಮಟ್ಟಕ್ಕೆ ಕೊಂಡೊಯ್ದ ರೊ. ಕೃಷ್ಣಪ್ಪ ಅವರನ್ನು ಗುರುತಿಸಲಾಯಿತು.

ಅಭಿನಂದನಾ ಸಮಾರಂಭವನ್ನು ಹೊರಾಂಗಣ ಸಭೆಯಾಗಿ ಸುಂದರವಾದ ಸ್ಥಳದಲ್ಲಿ ಆಯೋಜಿಸಿ ಉತ್ತಮ ಭೋಜನ ಕೂಟವನ್ನು ಪ್ರಾಯೋಜಿಸಿದ ರೊ. ಪ್ರಕಾಶ್ ಶೆಣೈ ಅವರನ್ನು ಗುರುತಿಸಲಾಯಿತು. ಇತ್ತೀಚೆಗೆ ಹುಟ್ಟು ಹಬ್ಬವನ್ನು ಆಚರಿಸಿಕೊಂಡ ರೊ. ಮಂಜುನಾಥ್ ಉಪಾಧ್ಯ, ರೊ. ಗುರುಪ್ರಸಾದ್ ಕಾಮತ್ ಹಾಗೂ ರೊ. ಕೊರಗಪ್ಪ ಶೆಟ್ಟಿಗಾರ್ ಇವರನ್ನು ಅಭಿನಂದಿಸಲಾಯಿತು. ಎಲ್ಲಾ ಬಹುಮಾನ ಹಾಗೂ certificate ಗಳನ್ನು ಸ್ಪರ್ಧಿಗಳಿಗೆ ನೀಡಿ ಅಭಿನಂದಿಸಲಾಯಿತು. ವಿಶೇಷ ಸಹಕಾರ ನೀಡಿದ ಎಲ್ಲ ಐಸಿರಿಯ ಮಕ್ಕಳನ್ನು ವಿಶೇಷ ಬಹುಮಾನದೊಂದಿಗೆ ಅಭಿನಂದಿಸಲಾಯಿತು.

## "ಐಶ್ವರ್ಯ" 18 ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ **ಹದಿನೆಂಟನೇ** ಆವೃತ್ತಿಯನ್ನು ರೋಟರಿ ಐಸಿರಿಯ ಸಮುದಾಯಸೇವಾ ನಿರ್ದೇಶಕರಾದ ರೊ. ಪ್ರಕಾಶ್ ಶೆಣೈ 6/11/2025ರಂದು ಬಿಡುಗಡೆಗೊಳಿಸಿದರು.



ರೋಟರಿ ಐಸಿರಿಯ **ಹದಿನಾರನೇ** ವಾರದ ಸಭೆಯಲ್ಲಿ ಅದೃಷ್ಟಶಾಲಿ ರೋಟೇರಿಯನ್ ಆಯ್ಕೆಯನ್ನು ರೊ. ಸ್ವಾತಿ ಪೈ ನಡೆಸಿ, ಜೋನ್ ಶ್ಲೋಕ್ ನಾಯಕ್ ಅದೃಷ್ಟಶಾಲಿ ಆಗಿ ಆಯ್ಕೆಯಾದರು.

Overall runner up trophy ಯನ್ನು ಹಾಗೂ ಗುಂಪು ಸ್ಪರ್ಧೆಗಳ ಟ್ರೋಫಿ ಯನ್ನು club ನಲ್ಲಿ ಇರಿಸುವುದಾಗಿ ನಿರ್ಧರಿಸಲಾಯಿತು. Runner up trophy ಯನ್ನು ಸರ್ವ ಸದಸ್ಯರಿಗೆ ಸಮರ್ಪಿಸಲಾಯಿತು. ರೊ. ಪ್ರಕಾಶ್ ಶೆಣೈ ಅವರು ಮಾತನಾಡಿ ಈ ಸಾಧನೆ ಸದಾ ಮುಂದುವರೆಯಲಿ ಎಂದು ಆಶಿಸಿದರು.

ಲಕ್ಕಿ ಸದಸ್ಯರ ಆಯ್ಕೆಯನ್ನು ರೊ. ಸ್ವಾತಿ ಪೈ ನಡೆಸಿದರು. ಜೋನ್ ಶ್ಲೋಕ್ ನಾಯಕ್ ಅವರು ಅದೃಷ್ಟಶಾಲಿ ವ್ಯಕ್ತಿಯಾಗಿ ಮೂಡಿಬಂದರು. ಅಧ್ಯಕ್ಷರು ಪ್ರತಿ ಸದಸ್ಯರ ಸಹಭಾಗಿತ್ವ, ಸಹಕಾರ ಮತ್ತು ಪ್ರೋತ್ಸಾಹಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯದರ್ಶಿ ಧನ್ಯವಾದ ಸಮರ್ಪಣೆಗೈದರು. ದಂಡಪಾಣಿ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ಸಹಭೋಜನ ದೊಂದಿಗೆ ಕುಮಾರಿ ಗಾನವಿ ಅವರ ಕೊಳಲು ವಾದನ ಎಲ್ಲರ ಮನಗೆದ್ದಿತು.